ಆ) ಹಾಗಿದ್ದಲ್ಲಿ ೧೯೮೬-೮೭ರ ಆಯವ್ಯಯದಲ್ಲಿ ಮೇಲ್ಕಂಡ ಯೋಜನೆಗಳನ್ನು ಆಳವಡಿಸಿ ಹಂತ ಹಂತವಾಗಿ ಕಾರ್ಯಕ್ಕೆಗೊಳ್ಳಲು ಸರ್ಕಾರದವರು ಭರವಸೆ ಕೊಡುವರೆ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು

ಆ) ಪರಿಶೀಲನೆಯಲ್ಲಿದೆ.

ಸಮಾಜ ಕಲ್ಯಾಣ ಇಲಾಖೆಯಿಂದ ಸಹಾಯ ಧನ ಪಡೆಯುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಮತ್ತು ಸಮಾಜ ಕಲ್ಯಾಣ ಸಲಹಾ ಮಂಡಳಿಗಳ ಬಗ್ಗೆ.

೨೯. ಶ್ರೀ ರಾಜಂಗೌಡ (ಪನೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಸ್ವಯಂ ಸೇವಾ ಸಂಸ್ಥೆಗಳು ರಾಜ್ಯ ಸಮಾಜ ಕಲ್ಯಾಣ ಸಲಹಾ ಮಂಡಳಿ ಮತ್ತು ಸಮಾಜ ಕಲ್ಯಾಣ ಇಲಾಖೆಯಿಂದ ಸಹಾಯಧನ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದರೆ ಇದನ್ನು ತಡೆಯಲು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಹೌದು, ಆದರೆ ಈ ಧನ ಸಹಾಯವನ್ನು ಬೇರೆ ಬೇರೆ ಕಾರ್ಯಕ್ರಮಗಳಿಗೆ ಬೇರೆ ಬೇರೆ ಸ್ಥಳಗಳಿಗೆ ಕೊಡಲಾಗಿದೆ. ಪುನರಾವರ್ತಿತ ಸಹಾಯಧನ ನೀಡಲಾಗಿಲ್ಲ.

ಆ) ಉದ್ಭವಿಸುವುದಿಲ್ಲ.

ಸಂಡೂರು ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆ ಜಾರಿಗೆ ತರುವ ಬಗ್ಗೆ.

೩೦. ಶ್ರೀ ಯು. ಭೂಪತಿ.—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಂಡೂರು ತಾಲ್ಲೂಕಿನ ಶೇಕಡ ೯೫ ರಷ್ಟು ಹಳ್ಳಿಗಳು ಬಣ ಬೇಸಾಯವನ್ನು ಅವಲಂಬಿಸಿರುವುದುರಿಂದ ಏತ ನೀರಾವರಿ ಯೋಜನೆಯನ್ನು ಜಾರಿಗೆ ತರುವ ಉದ್ದೇಶ ಸರ್ಕಾರದವರ ಗಮನದಲ್ಲಿದೆಯೇ ?

ಆ) ಹಾಗಿದ್ದಲ್ಲಿ ಏತ ನೀರಾವರಿ ಯೋಜನೆಯಲ್ಲಿ ಯಾವ್ಯಾವಹಳ್ಳಿಗಳಲ್ಲಿ ಮತ್ತು ಎಷ್ಟು ಅವಧಿಯಲ್ಲಿ ಜಾರಿಗೆ ತರಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ಮತ್ತು ನೀರಾವರಿ ಮಂತ್ರಿಗಳು).—

ಅ) ಏತ ನೀರಾವರಿಗೆ ಸೂಕ್ತವಾದ ಯಾವ ನಿವೇಶನಗಳೂ ಇದುವರೆಗೆ ಕಂಡು ಬಂದಿಲ್ಲ.

ಆ) ಉದ್ಭವಿಸುವುದಿಲ್ಲ.

ವೆಂಕಟಸ್ವಾಮಿ ಆಯೋಗದ ವರದಿಯ ಕುರಿತು.

೩೧೭. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಟಿ. ವೆಂಕಟಸ್ವಾಮಿ ಆಯೋಗವು ಹಾಕಿಕೊಂಡ ಮಾರ್ಗದರ್ಶನ ಯಾವುದು ?

ಆ) ಸದರಿ ಆಯೋಗವು ತನ್ನ ವರದಿಯನ್ನು ಸಲ್ಲಿಸಲು ಕಾಲಮಿತಿಯನ್ನು ಹಾಕಿಕೊಂಡಿದೆಯೆಂ, ಹಾಗಿಲ್ಲದಿದ್ದಲ್ಲಿ ಸಲ್ಲಿಸುವುದಾದರೂ ಎಂದು ?

ಇ) ಸದರಿ ಆಯೋಗದ ವರದಿಯು ಸರಕಾರಕ್ಕೆ ಸಲ್ಲಿಸಿದ ನಂತರ ಹಾವನೂರ ವರದಿಯ ಕಾರ್ಯಾಚರಣೆಯನ್ನು ಹಿಂದಕ್ಕೆ ತೆಗೆದುಕೊಳ್ಳಲಾಗುವುದೇ ?

ಶ್ರೀ ವಿ ಎಲ್ ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ಆಯೋಗಕ್ಕೆ ವಹಿಸಿರುವ ಪರಿಶೀಲನಾಂಶಗಳನ್ನು ಅನುಬಂಧ-೧ರಲ್ಲಿ ಸೂಚಿಸಿದೆ.